## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.217/2021

### ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಮುರುಡೇಶ ಎಸ್.ಆರ್ | CW: 1 | PW: 1 |
| ತಂದೆಯ ಹೆಸರು | : | ಸಣ್ಣ ರಂಗಪ್ಪ | | |
| ವಯಸ್ಸು | : | 50 | | |
| ವೃತ್ತಿ | : | ಅಬಕಾರಿ ಉಪ ಅಧಿಕ್ಷಕರು | | |
| ವಾಸಸ್ಥಳ | : | ಹೊನ್ನಾಳಿ | | |

ದಿನಾಂಕಃ 26.05.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು ದಿಃ 02.12.2019 ರಿಂದ ದಿಃ 10.02.2022 ರವರೆಗೆ ಅಬಕಾರಿ ನಿರೀಕ್ಷಕರಾಗಿ ಹೊನ್ನಾಳಿ ವಲಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ17.12.2020-21 ನೇ ಸಾಲಿನ ಗ್ರಾಮ ಪಂಚಾಯತಿ ಚುನಾವಣೆ ನಿಮಿತ್ತ ನಾನು ಮತ್ತು ಚಾಸಾ.4 ಮತ್ತು 5 ರವರು ಇಲಾಖಾ ವಾಹನದಲ್ಲಿ ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿ ತಾಲ್ಲೂಕಿನಲ್ಲಿ ಸುಮಾರು ಮಧ್ಯಾಹ್ನ 12.30 ಸಮಯದಲ್ಲಿ ಗಸ್ತು ಮಾಡುತ್ತಿರುವಾಗ ಚೆನ್ನೇನಹಳ್ಳಿ ಗ್ರಾಮ ಅಕ್ರಮ ಮದ್ಯ ಸಾಗಾಣಿಕೆ ಆಗುತ್ತಿದೆ ಎಂದು ಮಾಹಿತಿ ಬಂದ ಮೇರೆಗೆ ಸಾಸ್ವೆಹಳ್ಳಿ ಬಸ್ಸು ನಿಲ್ದಾಣದಲ್ಲಿ ದಾಳಿಗೆ ಸಹಕರಿಸುವಂತೆ ಚಾಸಾ.2 ಮತ್ತು 3 ರವರನ್ನು ಕೇಳಿಕೊಂಡಿದ್ದು, ಅದಕ್ಕೆ ಅವರು ಒಪ್ಪಿದ ಮೇರೆಗೆ ಅವರನ್ನು ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಕ್ಯಾಸಿನಕೆರೆ ಗ್ರಾಮದ

ಮಾರ್ಗವಾಗಿ ಚೆನ್ನೆನಹಳ್ಳಿ ತಾಂಡಕ್ಕೆ ಹೋಗುವಾಗ ಹಳ್ಳದ ಬಳಿ ಒಬ್ಬ ವ್ಯಕ್ತಿಯು ಬಿಳಿ ಚೀಲವನ್ನು ಹಿಡಿದು ನಿಂತುಕೊಂಡಿದ್ದು ಇಲಾಖಾ ವಾಹನಲ್ಲಿ ಬರುತ್ತಿದ್ದ ನಮ್ಮನ್ನು ನೋಡಿ ಕೈಯಲ್ಲಿ ಇದ್ದ ಚೀಲವನ್ನು ಅಲ್ಲೆ ಬಿಟ್ಟು ಓಡಿ ಹೋಗಿರುತ್ತಾನೆ. ಸಿಬ್ಬಂದಿಯವರು ಬೆನ್ನಟ್ಟಿದರು ಆತ ಸಿಗಲಿಲ್ಲ.

ಓಡಿ ಹೋದ ವ್ಯಕ್ತಿಯ ಬಗ್ಗೆ ಸ್ಥಳಿಯರನ್ನು ವಿಚಾರಿಸಲಾಗಿ ಆತನ ಹೆಸರು ಚೇತನ ತಂದೆ ಹೆಸರು ತಾವರೆನಾಯ್ಕ, ಚೆನ್ನನಹಳ್ಳಿ ತಾಂಡು ಎಂದು ಗೊತ್ತಾಯಿತು. ಸದರಿ ಆಸಾಮಿ ಬಿಟ್ಟು ಹೋದ ಬಿಳಿ ಚೀಲವನ್ನು ಚಾಸಾ.2 ಮತ್ತು 3 ಸಮಕ್ಷಮ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು ಪರಿಶೀಲಿಸಲಾಗಿ 90 ಎಂ.ಎಲ್ ನ ಬೆಂಗಳೂರು ಮಾಲ್ಟ್ ವಿಸ್ಕಿಯಾ 96 ಮಧ್ಯ ತುಂಬಿದ ಟೆಟ್ರಾ ಪ್ಯಾಕುಗಳು ಹಾಗೂ 90 ಮಿಲಿಯ ಹೈವರ್ಡ್ಸ್ ವಿಸ್ಕಿ ಯ 40 ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳಿದ್ದು ಅವುಗಳಲ್ಲಿ 18 ಬೆಂಗಳೂರು ಮಾಲ್ಟ್ ವಿಸ್ಕಿ ಯ ಟೆಟ್ರಾ ಪ್ಯಾಕ್ ಗಳನ್ನು ಹಾಗೂ ಹೈವರ್ಡ್ಸ್ ವಿಸ್ಕಿ ಯ 12 ಟೆಟ್ರಾ ಪ್ಯಾಕ್ ಗಳನ್ನು ರಸಾಯನಿಕ ವಿಶ್ಲೇಷಣೆಗಾಗಿ ಪ್ರತ್ಯೇಕವಾಗಿ ಮಾದರಿ ತೆಗೆದು ಬಿಳಿ ಚೀಲದಲ್ಲಿ ಇಟ್ಟು ಅದಕ್ಕೆ ಇಲಾಖಾ ಮೊಹರು ಹಾಕಿ ಸೀಲ್ ಹಾಕಿ ಮಾದರಿ ಮೊಹರಿನ ಚೀಟಿ ತಯಾರಿಸಿ ಅದಕ್ಕೆ ನಾನು ಮತ್ತು ಪಂಚರಾದ ಚಾಸಾ 2 ಮತ್ತು 3 ರವರ ಸಹಿಗಳನ್ನು ಪಡೆದುಕೊಂಡು ಅಂಟಿಸಿರುತ್ತೇವೆ. ಪಂಚರ ಸಮಕ್ಷಮ ಮಧ್ಯಾಹ್ನ 1.15 ರಿಂದ 2.15 ರವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಮುದ್ದೆ ಮಾಲನ್ನು ವಶಪಡಿಸಿಕೊಂಡು ಕಚೇರಿಗೆ ತೆಗೆದುಕೊಂಡು ಹೋಗಿರುತ್ತೇವೆ. ಕಚೇರಿಯ ನಂತರ ಪ್ರಥಮ ವರ್ತಮಾನ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮುಂದಿದ ತನಿಖೆಗಾಗಿ ಕಡತವನ್ನು ದಿಃ 20.12.2020 ರಂದು ಚಾಸಾ 8 ರವರಿಗೆ ಹಸ್ತಾಂತರಿಸಿರುತ್ತೇನೆ. |ಓಡಿಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಆರೋಪಿಯ ಗುರುತಿಸುವಿಕೆಗಾಗಿ ಆರೋಪ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 12 ಹೈವರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 1 ಎಂದು, ಬೆಂಗಳೂರು ಮಾಲ್ಟ್ ವಿಸ್ಕಿಯ 18 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ 2 ಎಂದು ಗುರುತಿಸಲಾಯಿತು.

ಸಾಕ್ಷಿಯು ಮಹಜರ್ ಮತ್ತು ಮಹಜರ್ ನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಮಾದರಿ ಮೊಹರಿನ ನಕಲನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು

ಗುರುತಿಸಲಾಯಿತು. ಲಿಸ್ಟ್ ಆಫ್ ಆರ್ಟಿಕಲ್ಸ್ ನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸರ್ಕಾರಿ ತರ್ಪೆ ಪಿರ್ಯಾದನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಸ್ ಎಂ ಬಿ ವಕೀಲರಿಂದಃ-

ಸಾಸ್ವೆಹಳ್ಳಿ ಗ್ರಾಮದಲ್ಲಿ ದಿಃ 17.07.2021 ರಂದು ಯಾವ ಸಮಯದಲ್ಲಿ ಗಸ್ತು ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಮಧ್ಯಾಹ್ನ 12.30 ಎಂದು ನುಡಿಯುತ್ತಾರೆ. ಅಕ್ರಮ ಮಧ್ಯ ಸಾಗಾಣಿಕೆಯ ಮಾಹಿತಿ ಬಂದ ಎಷ್ಟು ಸಮಯಕ್ಕೆ ದಾಳಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಬಸ್ ಸ್ಟ್ಯಾಂಡ್ ಗೆ ಹೋಗಿ ಪಂಚರನ್ನು ಕರೆದುಕೊಂಡು ದಾಳಿಗೆ ಹೋಗಿರುತ್ತೀನಿ ಎಂದು ನುಡಿಯುತ್ತಾರೆ. ಪಂಚರನ್ನು ಬರಮಾಡಿಕೊಂಡ ಸಮಯ ಎಷ್ಟು ಎಂದರೆ ಸಮಯ ಮಧ್ಯಾಹ್ನ 12.50 ಎಂದು ನುಡಿಯುತ್ತಾರೆ. ಸಾಸ್ವೆಹಳ್ಳಿ ಗ್ರಾಮದಿಂದ ಕ್ಯಾಸಿನಕೆರೆ ಗ್ರಾಮಕ್ಕೆ ಎಷ್ಟು ಕಿ.ಮೀ ದೂರ ಇದೆ ಎಂದರೆ ಸುಮಾರು 6 ಕಿ.ಮೀ ದೂರ ಇದೆ ಎಂದು ನುಡಿಯುತ್ತಾರೆ. ಕ್ಯಾಸಿನಕೆರೆಯಿಂದ ಚನ್ನೇಹಳ್ಳಿ ಗ್ರಾಮಕ್ಕೆ ಎಷ್ಟು ದೂರ ಎಂದರೆ 1.5 ಕಿ.ಮೀ ಎಂದು ನುಡಿಯುತ್ತಾರೆ. ಚುನಾವಣಾ ಸಮಯದಲ್ಲಿ ಸಾಮಾನ್ಯವಾಗಿ ಮಧ್ಯ ಮಾರಾಟ ನಿಷೇಧ ಇರುತ್ತದೆ ಎಂದರೆ ಸರಿಯಲ್ಲ. ಚುನಾವಣಾ ಸಮಯದಲ್ಲಿ ಮಧ್ಯ ಮಾರಾಟಕ್ಕೆ ಸರ್ಕಾರದಿಂದ ನಿಷೇಧ ಇರಲಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾವು ಚನ್ನೇನ ಹಳ್ಳಿ ಗ್ರಾಮಕ್ಕೆ ಗಸ್ತಿಗೆ ಹೋದಾಗ ಆರೋಪಿಯು ನಮ್ಮನ್ನು ನೋಡಿ ಓಡಿಹೋದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಯ ಹೆಸರು ಮತ್ತು ವಿಳಾಸವನ್ನು ಘಟನಾ ಸ್ಥಳದಲ್ಲಿ ಇದ್ದ ಸ್ಥಳೀಯರು ನಮಗೆ ಮಾಹಿತಿ ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಘಟನಾ ಸ್ಥಳದಲ್ಲಿ ಆರೋಪಿಯು ಬಿಳಿ ಚೀಲವನ್ನು ಬಿಟ್ಟು ಹೋಗಿರುತ್ತಾನೆ ಎಂದು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 90 ಎಂ.ಎಲ್ ನ ಬೆಂಗಳೂರು ಮಾಲ್ಟ್ ವಿಸ್ಕಿಯಾ 96 ಮಧ್ಯ ತುಂಬಿದ ಟೆಟ್ರಾ ಪ್ಯಾಕುಗಳು ಹಾಗೂ 90 ಮಿಲಿಯ ಹೈವರ್ಡ್ಸ್ ವಿಸ್ಕಿಯ 40 ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಸದರಿ ಬಿಳಿ ಚೀಲದಲ್ಲಿ ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಿಳಿ ಚೀಲದಲ್ಲಿದ್ದ ಎಲ್ಲಾ ಮಧ್ಯ ತುಂಬಿದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿ. ನಿಪಿ 1 ರಂತೆ ಚಾಸಾ 2 ಮತ್ತು 3 ರವರ

ಸಮಕ್ಷಮ ನಾನು ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 3 ಕ್ಕೆ ಚಾಸಾ 2 ಮತ್ತು 3 ರವರ ಸಹಿಗಳನ್ನು ನಮ್ಮ ಕಚೇರಿಯಲ್ಲೇ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪಂಚರ ಹೆಸರು ಮತ್ತು ವಿಳಾಸವನ್ನು ನಿಪಿ 1 ರ 2 ನೇ ಪುಟದಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ. ಘಟನಾ ಸಮಯದಲ್ಲಿ ಚುನಾವಣೆ ಇದ್ದುದ್ದರಿಂದ ನಮ್ಮ ಕಚೇರಿಯ ಅಂಕಿ ಅಂಶ ಗಳಿಗೆ ಸದರಿ ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ರೀತಿಯ ಮಧ್ಯದ ಪೌಚ್ ಗಳು ಎಲ್ಲಾ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮು ಮಾ 1 ಮತ್ತು 2 ನ್ನು ಈ ಕೇಸಿಗೆ ಸಂಬಂಧಿಸಿದಂತೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ , ಆರೊಪಿಯ ವಿರುದ್ದ ನಿಪಿ 5 ರಂತೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.